ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1811

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 24.03.2020

ಉತ್ತರಿಸುವ ಸಚಿವರು. : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾರಾಟ ಮಾಡುವ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿಯಾಗಿ ಅಧಿಕ ದರ ವಿಧಿಸಲು ನಿಯಮಗಳಲ್ಲಿ ಅವಕಾಶವಿದೆಯೇ;	ಇಲ್ಲ. ಈ ರೀತಿ ಅಧಿಕ ದರ ವಿಧಿಸುವುದು ಪೊಟ್ಟಣ ಸಾಮಗ್ರಿ ನಿಯಮ 2011ರ ಅಡಿಯಲ್ಲಿ ಅಪರಾಧವಾಗಿರುತ್ತದೆ.
(ಆ)	ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವ ಮಲ್ಟಿಫ್ಲೆಕ್ಸ್‌ಗಳ ಲೈಸನ್ಸ್ ರದ್ದು ಮಾಡಲು ಸರ್ಕಾರ ಚಿಂತಿಸಿದೆಯೇ; ಇಲ್ಲವಾದ್ದಲ್ಲಿ, ಅಂತಹ ಮಲ್ಟಿಫ್ಲೆಕ್ಸ್‌ಗಳ ಮೇಲೆ ಯಾವ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ;	ತಿಂಡಿ-ತಿನಿಸು ಪಾನೀಯಗಳನ್ನು ಮಾರಾಟ ಮಾಡಲು ನಗರ ಪಾಲಿಕೆಗಳು ಹಾಗೂ ಆರೋಗ್ಯ ಇಲಾಖೆ ಲೈಸೆನ್ಸ್ ನೀಡುವ ಪ್ರಾಧಿಕಾರವಾಗಿರುತ್ತವೆ. ಸದರಿ ಲೈಸೆನ್ಸ್ ಗಳನ್ನು ರದ್ದು ಮಾಡಲು ಕಾನೂನು ಮಾಪನಶಾಸ್ತ್ರ ಇಲಾಖೆಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ಈ ರೀತಿಯ ಪ್ರಸ್ತಾಪ ಇರುವುದಿಲ್ಲ. ಕಾನೂನು ಮಾಪನಶಾಸ್ತ್ರ ನಿಯಮಗಳನುಸಾರ, ಮುದ್ರಿತ ದರಕ್ಕಿಂತ ಅಧಿಕ ಬೆಲೆಗೆ ಮಾರಾಟ ಮಾಡುವ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಮೊಕದ್ದಮೆ ಹೂಡಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

(ಇ)	ಕಳೆದ 2 ವರ್ಷಗಳಲ್ಲಿ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವ ಮಲ್ಟಿಫ್ಲೆಕ್ಸ್ ಚಿತ್ರಮಂದಿರಗಳ ವಿರುದ್ಧ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)	ಕಳೆದ 2 ವರ್ಷಗಳಲ್ಲಿ ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾರಾಟ ಮಾಡುವ ಪೊಟ್ಟಣ ಸಾಮಗ್ರಿಯ ರೂಪದ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವ ಮಲ್ಟಿಫ್ಲೆಕ್ಸ್ ಚಿತ್ರಮಂದಿರಗಳ ವಿರುದ್ಧ ಈ ಕೆಳಕಂಡಂತೆ ಪ್ರಕರಣಗಳನ್ನು (ಜಿಲ್ಲಾವಾರು) ದಾಖಲಿಸಲಾಗಿದೆ.

ಜಿಲ್ಲೆ	ತಪಾಸಣೆ	ಹೂಡಿದ ಮೊಕದ್ದಮೆ	ವಸೂಲಾದ ದಂಡ
2018-19			
ಬೆಂಗಳೂರು ಜಿಲ್ಲೆ	15	03	20,000
ಮೈಸೂರು ಜಿಲ್ಲೆ	01	01	5,000
ಉಡುಪಿ ಜಿಲ್ಲೆ	02	-	-
ಒಟ್ಟು	18	04	25,000
2019-20			
ಬೆಂಗಳೂರು ಜಿಲ್ಲೆ	16	1	-
ಒಟ್ಟು	16	1	-

ಆನಾಸ 119 ಡಿಆರ್‌ಎ 2020 (ಇ-ಆಫೀಸ್)

(ಕೆ. ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು